ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್ (ಬ್ಯಾಡಗಿ): ಮಾನ್ಯ ಉಪಾಧ್ಯಕ್ಷರೇ, ನಮ್ಮಲ್ಲಿ ರೈತರ ಮೇಲೆ, ವಿದ್ಯಾರ್ಥಿಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು: ಅದಕ್ಕೆ ಪ್ರತ್ಯೇಕವಾಗಿ ಅನುಮತಿಯನ್ನು ಕೊಡುತ್ತೇವೆ; ಆಗ ಅದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವಿರಂತೆ. ಈಗ ನಾವು ಕುಳಿತುಕೊಳ್ಳಿ. ರವಿಯವರೇ, ನೀವು ಕುಳಿತುಕೊಳ್ಳಿ. ನಾಗರಾಜ್‌ರವರೇ, ನೀವು ಮಾತನಾಡಿ.

ಶ್ರೀ ಸಿ.ಟಿ. ರವಿ: ಇವತ್ತು ಪ್ರಸ್ತಾಪ ಮಾಡಿ ಎಂದು ನನಗೆ ಸಭಾಧ್ಯಕ್ಷರು ತಮ್ಮ ಕೊಠಡಿಯಲ್ಲಿ ಹೇಳಿದ್ದರು. ನೀವು ನನ್ನನ್ನು ಕರೆಯುತ್ತೀರಿ ಎಂದು ತಿಳಿದುಕೊಂಡು ನಾನು ಇಷ್ಟು ಹೊತ್ತು ಕಾಯುತ್ತಾ ಕುಳಿತುಕೊಂಡಿದ್ದೆ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್: ರೈತರ ಮೇಲೆ, ವಿದ್ಯಾರ್ಥಿಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಅದರ ಬಗ್ಗೆ ಹಿಂದಿನ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ಕೂಡಲೇ ಆ ಕೇಸುಗಳನ್ನು ಹಿಂತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದರು. ಆ ಭರವಸೆಗಳು ಇನ್ನೂ ಭರವಸೆಗಳಾಗಿಯೇ ಉಳಿದಿವೆಯೇ ಹೊರತು.....

ಉಪಾಧ್ಯಕ್ಷರು: ನೀವು ಏನು ಮಾತನಾಡಬೇಕೆಂದಿದ್ದೀರೋ, ಅದನ್ನು ರೈಟಿಂಗ್‌ನಲ್ಲಿ ಕಳುಹಿಸಿ, ಆಮೇಲೆ ಅದನ್ನು ನೋಡೋಣ. ವಾಟಾಳ್ ನಾಗರಾಜ್‌ರವರೇ, ಈಗ ತಾವು ಮಾತನಾಡಿ.

ಶ್ರೀ ಸಿ.ಟಿ. ರವಿ: ನಾನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ನೆಹರೂ ಚನ್ನಬಸಪ್ಪ ಓಲೇಕಾರ್: ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ನನಗೆ ಕಾಲಾವಕಾಶ ಕೊಡಬೇಕು.

ಉಪಾಧ್ಯಕ್ಷರು: ನೀವು ರೈಟಿಂಗ್‌ನಲ್ಲಿ ಕಳುಹಿಸಿ.

ಶ್ರೀ ಸಿ.ಟಿ. ರವಿ: ನಾನು ಕಳುಹಿಸಿದ್ದೇನೆ.

ಉಪಾಧ್ಯಕ್ಷರು: ಇಲ್ಲ, ಬಂದಿಲ್ಲ. ರವಿಯವರೇ, ನೀವು ರೈಟಿಂಗ್‌ನಲ್ಲಿ ಕಳುಹಿಸಿ. ಆಮೇಲೆ ನೋಡೋಣ. ಈಗ ಅವರಿಗೆ ಅವಕಾಶ ಮಾಡಿಕೊಡಿ, ವಾಟಾಳ್ ನಾಗರಾಜ್‌ರವರು ಮಾತನಾಡಲಿ. ಜೀರೋ ಅವರ್ ಮುಗಿದು ಹೋಗಿದೆ. ದಯವಿಟ್ಟು, ಈಗ ನೀವು ಅಡ್ಡಿಪಡಿಸಬೇಡಿ. ನೀವು ರೈಟಿಂಗ್‌ನಲ್ಲಿ ಕಳುಹಿಸಿ, ಆಮೇಲೆ ಅದನ್ನು ನೋಡೋಣ. ಮೊದಲು ಇದು ಮುಗಿಯಲಿ. ರವಿಯವರೇ, ನಿಮಗೆ ನಾಳೆ ಅವಕಾಶ ಕೊಡುತ್ತೇವೆ, ನಾಳೆ ಜೀರೋ ಅವರ್‌ನಲ್ಲಿ ನೀವು ಮಾತನಾಡಿ.....

(ಒ) ವಿಷಯ: ಚಿಕ್ಕಮಗಳೂರು ಜಿಲ್ಲಾಧಿಕಾರಿಯವರು ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ನೃತ್ಯ ಮಾಡಿರುವುದರ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೇ, ಬಹಳ ಪ್ರಮುಖವಾದಂಥ ಮತ್ತು ಗಂಭೀರವಾದಂಥ ವಿಷಯವನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ಚಿಕ್ಕಮಗಳೂರಿನ

ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯಿತಿಯ ಸಭಾಂಗಣದಲ್ಲಿ ನೃತ್ಯ ಮಾಡಿರುವ ವಿಚಾರವನ್ನು ಮೇಲ್ಮನೆಯಲ್ಲಿ, ಅದರ ವಿಪಕ್ಷದ ನಾಯಕರು ಮತ್ತು ಈ ಕೆಳಮನೆಯಲ್ಲಿ ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು, ಚಿರಂಜೀವಿ ಸಿಂಗ್ ನೇತೃತ್ವದ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸುತ್ತೇವೆ, ಅವರು ತನಿಖೆ ಮಾಡಿ ವರದಿ ಕೊಡುತ್ತಾರೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳಿದ್ದರು. ಆದರೆ, ಇಲ್ಲಿ ಜಡ್ಜ್‌ಮೆಂಟ್‌ನ್ನು ಮೊದಲೇ ಬರೆದಿಟ್ಟುಕೊಂಡು, ವಿಚಾರಣೆ ಮಾಡತಕ್ಕಂಥ ಈ ನಾಟಕ ಏಕೆಂದು ನನಗೆ ಗೊತ್ತಾಗಲಿಲ್ಲ. ಚಿರಂಜೀವಿ ಸಿಂಗ್‌ರವರು ವರದಿ ಕೊಡುವುದಕ್ಕಿಂತ ಮುಂಚಿತವಾಗಿಯೇ, ಆ ಜಿಲ್ಲಾಧಿಕಾರಿಗಳಿಗೆ ಕ್ಲೀನ್‌ಚಿಟ್ ಕೊಡತಕ್ಕಂಥ ಕೆಲಸವನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ರಾಜ್ಯದ ವಾರ್ತಾ ಸಚಿವರು ಪತ್ರಿಕೆಗಳ ಮೂಲಕ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ನೃತ್ಯ ಮಾಡಿಲ್ಲ, ಅವರು ತಮ್ಮ ಸ್ನೇಹಿತರ ಜೊತೆಯಲ್ಲಿ ಮಾತನಾಡಿದ್ದಕ್ಕೇ, ನೃತ್ಯ ಮಾಡಿದ್ದಾರೆ ಎನ್ನುವಂಥ ಆಪಾದನೆಯನ್ನು ಮಾಡಿದ್ದಾರೆಂದು ಹೇಳಿದರು ಮತ್ತು ಅವರು ಯಾವುದೇ ರೀತಿಯ ನೃತ್ಯ ಮಾಡಿಲ್ಲ ಎಂದು ಹೇಳಿದ್ದಾರೆ. ಹಾಗಿದ್ದರೆ ಈ ಆರೋಪವನ್ನು ಮಾಡಿರತಕ್ಕಂಥ ಮಾನ್ಯ ಈಶ್ವರಪ್ಪನವರು, ಶಂಕರಮೂರ್ತಿಯವರು ಮತ್ತು ನನ್ನನ್ನು ತನಿಖೆಯ ಕಾಲದಲ್ಲಿ ಅವರು ನೃತ್ಯ ಮಾಡಿದ್ದಾರೆಯೇ. ಇಲ್ಲವೇ ಎಂದು ನಮ್ಮನ್ನು ಕೇಳಲೇ ಇಲ್ಲ. ನಮ್ಮನ್ನು ಕೇಳಿದ್ದರೆ, ನಾವು ಸಾಕ್ಷಿಗಳನ್ನು ಒದಗಿಸುತ್ತಿದ್ದೆವು. ಆದರೆ, ಇದೊಂದು ಮ್ಯಾಚ್ ಫಿಕ್ಸಿಂಗ್ ರೀತಿಯಲ್ಲಿ, ಇದನ್ನು ಕೆಲವೇ ಗುಂಪಿನವರಿಗೆ ಹೇಳಿಕೊಂಡು ಅವರ ಜೊತೆಯಲ್ಲಿ ತನಿಖೆ ಮಾಡಿದ ಹಾಗೆ ಮಾಡಿಸಿ, ಸದನಕ್ಕೆ ಅವರು ವರದಿ ಕೊಡುವುದಕ್ಕೆ ಮುಂಚೆಯೇ, ಜಿಲ್ಲಾಧಿಕಾರಿಗಳ ಪರವಾಗಿ ಉಸ್ತುವಾರಿ ಸಚಿವರಾದ ವಾರ್ತಾ ಸಚಿವರು (ಬಿ) ರಿಪೋರ್ಟ್ ಸಲ್ಲಿಸುತ್ತಾರೆ ಎಂದ ಮೇಲೆ, ಈ ಸಮಿತಿಯನ್ನು ಏಕೆ ನೇಮಕ ಮಾಡಬೇಕಾಗಿತ್ತು? ಸದನದಲ್ಲಿ ಏಕೆ ಉತ್ತರ ಕೊಡಬೇಕಾಗಿತ್ತು? ಹಾಗಾಗಿ, ಇದು ಸಬ್-ಜ್ಯುಡೀಸ್ ಆಗುವುದಿಲ್ಲವೇ ಎನ್ನುವುದನ್ನು ತಾವು ಯೋಚನೆ ಮಾಡಿ. ಸದನ ನಡೆಯುತ್ತಿರುವಾಗ, ಸದನಕ್ಕೆ ವರದಿ ಸಲ್ಲಿಸುವುದಕ್ಕೆ ಮುಂಚಿತವಾಗಿಯೇ, ಅವರನ್ನು ಸಮರ್ಥನೆ ಮಾಡಿ, ಏನು ನಡೆದೇ ಇಲ್ಲ ಎಂದು (ಬಿ) ರಿಪೋರ್ಟ್ ಕೊಡುವ ಕೆಲಸವನ್ನು ಸರ್ಕಾರದ ಒಬ್ಬರು ಸಚಿವರು ಮಾಡುತ್ತಾರೆ ಎಂದರೆ, ಇನ್ನು ವರದಿಯಲ್ಲಿ ಯಾವ ರೀತಿಯ ರಿಪೋರ್ಟ್ ಇರುತ್ತದೆ ಎನ್ನುವುದನ್ನು ಎಲ್ಲರೂ ಕಲ್ಪನೆ ಮಾಡಿಕೊಳ್ಳಬಹುದು. ಆರೋಪ ಮಾಡಿರತಕ್ಕಂಥ ನಮ್ಮನ್ನೂ ಸಹ, ನಿಮ್ಮ ಹತ್ತಿರ ಏನು ದಾಖಲೆಗಳಿವೆ, ಕೊಡಿ ಎಂದು ಕೇಳಿಲ್ಲ. ಈ ರೀತಿ ಮಾಡಿರತಕ್ಕಂಥಾದ್ದರಿಂದ ಇದು ಸಬ್-ಜ್ಯುಡೀಸ್ ಆಗುತ್ತದೆ ಎನ್ನುವುದು ನನ್ನ ಭಾವನೆ. ಈ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಇದು ಸಬ-ಜ್ಯೂಡಿಸ್ ಆಗುವುದಿಲ್ಲ ಎನ್ನುವುದು ನನ್ನ ಮೊದಲನೇ ಉತ್ತರ. ಏಕೆಂದರೆ, ಯಾವುದೇ ನ್ಯಾಯಾಲಯದಲ್ಲಿ ಈ ವಿಚಾರವಿಲ್ಲ. ಮಾನ್ಯ ಅಭಿವೃದ್ಧಿ ಆಯುಕ್ತರಿಗೆ ಈ ವಿಚಾರದಲ್ಲಿ ವರದಿಯನ್ನು ಕೊಡಬೇಕೆಂದು

ತಿಳಿಸಿದ್ದೇವೆ. 21ನೇ ತಾರೀಖು ಆ ವರದಿಯನ್ನು ಕೊಡುತ್ತಾರೆ ಎಂದು ಹೇಳಿದ್ದೇವು. ಆದ್ದರಿಂದ, ಇದು ಸಬ್-ಜ್ಯುಡೀಸ್ ಆಗತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಎರಡನೆಯದಾಗಿ, ಜಿಲ್ಲಾ ಉಸ್ತುವಾರಿ ಸಚಿವರಾದ ವಾರ್ತಾ ಸಚಿವರು ಕ್ಲೀನ್‌ಚಿಟ್ ಕೊಟ್ಟಿದ್ದಾರೆಂದು ಹೇಳಿದರು. ಹಾಸನದಲ್ಲಿ, ಸಚಿವರನ್ನು ಪ್ರಶ್ನೆ ಮಾಡಿದಂಥ ಸಂದರ್ಭದಲ್ಲಿ, "ಚಿಕ್ಕಮಗಳೂರು ಜಿಲ್ಲಾಧಿಕಾರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನೃತ್ಯ ಮಾಡಿಲ್ಲ ಎಂದು ವಾರ್ತಾ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಬಿ. ಶಿವರಾಂ ವರದಿ ಸಲ್ಲಿಕೆ ಮುನ್ನಾ ದಿನವೇ 'ಪ್ರಮಾಣ ಪತ್ರ' ನೀಡಿದ್ದಾರೆ. ಈ ಸಂಬಂಧದ ವರದಿಯನ್ನು ರಾಜ್ಯ ಅಭಿವೃದ್ಧಿ ಆಯುಕ್ತ ಚಿರಂಜೀವಿ ಸಿಂಗ್ ಅವರು ಮಾರ್ಚ್ 21 ರಂದು ಮುಖ್ಯಮಂತ್ರಿಯವರಿಗೆ ಸಲ್ಲಿಸಲಿದ್ದಾರೆ. ತನಿಖೆ ಹಂತದಲ್ಲಿ ಸಿಂಗ್ ಅವರು ತಮ್ಮೊಡನೆಯೂ ಚರ್ಚಿಸಿದ್ದು, 'ಜಿಲ್ಲಾಧಿಕಾರಿ ರಾಜೇಂದ್ರಕುಮಾರ್ ಕಠಾರಿಯಾ ಅವರು ಅಶಿಸ್ತಿನಿಂದ ನೃತ್ಯ ಮಾಡಿಲ್ಲ' ಎಂದು ಚಿರಂಜೀವಿ ಸಿಂಗ ತಮಗೆ ತಿಳಿಸಿದ್ದಾರೆಂದು ಶಿವರಾಂ ಭಾನುವಾರ 'ಕನ್ನಡಪ್ರಭಕ್ಕೆ ತಿಳಿಸಿದರು" ಎನ್ನುವ ವಿಷಯವನ್ನೊಳಗೊಂಡ ಪೇಪರ್ ಕಟಿಂಗನ್ನು, ಸಿ.ಟಿ. ರವಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿರುವ ತಮ್ಮ ವಿಷಯದ ಪ್ರಸ್ತಾಪದ ಜೊತೆಯಲ್ಲಿ ಕಳುಹಿಸಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ಮಾಹಿತಿ ಪ್ರಕಾರ, ಮಾನ್ಯ ಅಭಿವೃದ್ಧಿ ಆಯುಕ್ತರು ಈಗ ತನಿಖೆ ನಡೆಸುತ್ತಿದ್ದಾರೆ. ತನಿಖೆಯ ವರದಿ ಬಂದ ಮೇಲೆ, ಗೃಹಮಂತ್ರಿಗಳೂ ಆಗಿರುವಂಥ ಸನ್ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ, ತಾವು ಇದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸುವಂಥ ಅಗತ್ಯ ಈ ಸಂದರ್ಭದಲ್ಲಿ ಇಲ್ಲ ಎಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಹಿರಿಯ ಸಚಿವರಾಗಿ ತಾವು ಗಮನಿಸಬೇಕು. ಈ ವಿಷಯವನ್ನು ಎರಡೂ ಮನೆಗಳಲ್ಲಿ, ಜವಾಬ್ದಾರಿ ಇರುವಂಥ ಶಾಸಕರು ಮತ್ತು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಈ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಮುಖ್ಯಮಂತ್ರಿಗಳು ಚಿರಂಜೀವಿ ಸಿಂಗ್‌ರವರನ್ನು ಕಳುಹಿಸಿದ ಮೇಲೆ, ತನಿಖೆ ಮಾಡುವುದಕ್ಕೆ ಮುಂಚೆ ಸಂಬಂಧಪಟ್ಟ ಶಾಸಕರನ್ನು, ದಾಖಲೆಗಳನ್ನು ಕೊಡಿ ಎಂದು ಕೇಳುವುದು ತಮ್ಮ ಕರ್ತವ್ಯವಲ್ಲವೇ? ಸ್ವತಃ ಜಿಲ್ಲಾಧಿಕಾರಿಗಳೇ ಡ್ಯಾನ್ಸ್ ಮಾಡುತ್ತಿರುವಂಥ, ಕುಣಿಯುತ್ತಿರುವಂಥ ಫೋಟೋಗಳನ್ನು ನಾವು ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳೇ ಸಾರ್ವಜನಿಕವಾಗಿ ಪತ್ರಿಕಾ ಹೇಳಿಕೆಗಳ ಮೂಲಕ 'ನಾನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ತಪ್ಪೇ? ಎನ್ನುವ ಉತ್ತರವನ್ನೂ ಕೊಟ್ಟಿದ್ದಾರೆ. ಅದರ ಬಗ್ಗೆ ದಾಖಲೆಗಳಿವೆ, ಫೋಟೋಗಳಿವೆ. ಹೀಗಿರುವಾಗ, ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು, ತನಿಖೆ ಮುಗಿಯುವುದಕ್ಕೆ ಮೊದಲೇ ಇಂಟರ್‌ಫಿಯರ್ ಆಗಿ ಹೇಳಿಕೆಯನ್ನು ಕೊಡುತ್ತಾರೆ ಎನ್ನುವುದಾದರೆ, ಅಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ಆಗುತ್ತದೆಯೇ? ಇದು ಒಬ್ಬ ಜಿಲ್ಲಾ ಉಸ್ತುವಾರಿ ಸಚಿವರಾಗಲೀ ಅಥವಾ ಮತ್ತೊಬ್ಬ ಸಚಿವರಾಗಲೀ ನಡೆದುಕೊಳ್ಳತಕ್ಕಂಥ ರೀತಿಯೇ? ಅಂದರೆ, ನಾವು ಇಲ್ಲಿ ಗಂಭೀರವಾದ

ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ, ಅಧಿಕಾರಿಗಳ ಪರವಾಗಿ ಮಂತ್ರಿಗಳೇ ಸರ್ಟಿಫಿಕೇಟ್ ಕೊಡುವಂಥಾದ್ದು, ತನಿಖೆ ಮಾಡಿಸುತ್ತೇವೆ ಎಂದು ಹೇಳುವಂಥಾದ್ದು, ಅದು ವರದಿ ಸಲ್ಲಿಸುವುದಕ್ಕೆ ಮುಂಚೆಯೇ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು ಏನು ವಿಚಾರ ಗೊತ್ತಿಲ್ಲದೇ, ಅಲ್ಲಿ ಏನೂ ನಡೆದೇ ಇಲ್ಲ ಎಂದು ಹೇಳಿಕೆ ಕೊಡುವಂಥಾದ್ದು, ಜಿಲ್ಲಾಧಿಕಾರಿಗಳು ಹೇಳಿಕೆ ಕೊಡುವಂಥಾದ್ದು, ಇವುಗಳು ಎಷ್ಟರ ಮಟ್ಟಿಗೆ ಸರಿ? ಈಗಲಾದರೂ ತನಿಖೆ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರ ಹತ್ತಿರ ಇರುವ ದಾಖಲೆಗಳನ್ನು ಪರಿಶೀಲನೆ ಮಾಡಬೇಕಲ್ಲವೇ? ವ್ಯವಸ್ಥೆಯೆಂದರೆ ಅದಲ್ಲವೇ? ತನಿಖೆಯೆಂದರೇನು? ತನಿಖೆಯೆಂದರೆ ನಿಮ್ಮ ಸಂಬಂಧಪಟ್ಟ ಹೈಯರ್ ಅಥಾರಿಟೀಸ್ ಡಿ.ಸಿ. ಅವರ ಹತ್ತಿರ ಹೋಗಿ ಮಾತನಾಡಿ, ಅಲ್ಲಿರುವಂಥ ಅವರಿಗೆ ಬೇಕಾದವರ ಹತ್ತಿರ ಮಾತನಾಡಿ ಹೇಳಿಕೆ ಕೊಡುವುದಾದರೆ, ಒಂದು ತೀರ್ಮಾನಕ್ಕೆ ಬರುವುದಾದರೆ, ಅದು ತನಿಖೆ ಎಂದು ಕರೆಸಿಕೊಳ್ಳುವುದಿಲ್ಲ. ಅದಕ್ಕಾಗಿ ಈಗಲಾದರೂ, ಈ ರೀತಿಯ ಉದ್ಧಟತನದ ವರ್ತನೆಯನ್ನು ಯಾವುದೇ ಜಿಲ್ಲಾಧಿಕಾರಿ ಮಾಡಬಾರದು, ಅವರು ಆ ಚೌಕಟ್ಟನ್ನು ದಾಟಬಾರದು ಎನ್ನುವ ಅಪೇಕ್ಷೆ ನಿಮಗಿದ್ದರೆ, ಸರಿಯಾದಂಥ ಒಂದು ತನಿಖೆ ಮಾಡಿ, ಅವರನ್ನು ವಾರ್ನ್ ಮಾಡಿ ಈ ರೀತಿಯ ಘಟನೆಗಳು ಮರುಕಳಿಸದಂತೆ ಮಾಡಬೇಕಾದಂಥಾದ್ದು ಸರ್ಕಾರದ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ತುಂಬಾ ಸ್ಪಷ್ಟವಾಗಿ, ಆ ಒಂದು ಫೋಟೋವನ್ನು ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಕಳುಹಿಸಿದ್ದೇನೆ. ಮುಖ್ಯಮಂತ್ರಿಗಳು ಇದರ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಹೇಳಿದರು, ಅದರಂತೆ ತನಿಖೆಗೂ ಕಳುಹಿಸಿ ಕೊಟ್ಟರು. ತನಿಖೆಯ ವರದಿ ಸರ್ಕಾರಕ್ಕೆ ಬರುವುದಕ್ಕೆ ಮುಂಚೆಯೇ ಅದರ ಫಲಿತಾಂಶವನ್ನು ಅನೌನ್ಸ್ ಮಾಡಿಬಿಡುತ್ತೀರಾ? ನಿಮಗೆ ಇನ್ನೂ ವರದಿಯೇ ಬಂದಿಲ್ಲ. ಅದಕ್ಕೂ ಮೊದಲೇ, ಜವಾಬ್ದಾರಿ ಇರುವಂಥ ಒಬ್ಬ ಮಂತ್ರಿ ಸಾರ್ವಜನಿಕರ ಮುಂದೆ ಏನೂ ಆಗಿಯೇ ಇಲ್ಲ ಎನ್ನುವಂಥ ಹೇಳಿಕೆ ಕೊಡುವುದಾದರೆ, ಇನ್ನು ಮುಂದೆ ಇಂಥ ತನಿಖಾ ಸಮಿತಿಗಳನ್ನು ನೇಮಕ ಮಾಡಲೇಬೇಡಿ. ಹಾಗಿದ್ದರೆ, ನಾವೇಕೆ ಇಲ್ಲಿ ಪ್ರಸ್ತಾಪ ಮಾಡಬೇಕು? ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನುವ ಅಂಶವನ್ನು ನಾವು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ತಪ್ಪಿತಸ್ಥ ವ್ಯಕ್ತಿಗಳ ಬಗ್ಗೆ ಈ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ತುಂಬಾ ಕಠೋರವಾಗಿ ಮುಖ್ಯಮಂತ್ರಿಗಳು ಹೇಳಿದಾಗ, ನಮಗೆ ನಿಜಕ್ಕೂ ಸಂತೋಷವಾಯಿತು. ಇನ್ನೂ ಸರ್ಕಾರಕ್ಕೆ ವರದಿ ಬಂದಿಲ್ಲ ಎಂದು ನೀವು ಹೇಳುತ್ತಿದ್ದೀರಿ. ಆದರೆ ನಿಮ್ಮ ಸರ್ಕಾರದ ಒಬ್ಬ ಮಂತ್ರಿ ಏನೂ ನಡೆದಿಲ್ಲ ಎಂದು ಹೇಳಿಕೆ ಕೊಡುತ್ತಿದ್ದಾರೆ. ಹಾಗಾದರೆ, ಇನ್ನು ಮುಂದೆ ನಾವು ಇಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಬೇಕೋ, ಬೇಡವೋ ಎಂಬುದನ್ನು ಯೋಚನೆ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಚಿರಂಜೀವಿ ಸಿಂಗ್‌ರವರ ಬಗ್ಗೆ ನಮಗೆ ಬಹಳ ಗೌರವವಿದೆ. ಆದರೆ ಈ ವಿಚಾರದಲ್ಲಿ ತನಿಖೆ ಮಾಡಲು ಅವರಿಗೆ ಆದೇಶ ಮಾಡಿದುದು ಅಷ್ಟೊಂದು ಸಮಂಜಸವಲ್ಲ ಎನ್ನುವುದು ನನ್ನ ಭಾವನೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಸನ್ಮಾನ್ಯ ರಾಜೇಂದ್ರಕುಮಾರ್ ಕಠಾರಿಯಾರವರಿಗೆ ಆಶ್ರಯ ಇದ್ದದ್ದು ಚಿರಂಜೀವಿ ಸಿಂಗ್‌ರವರದ್ದೇ. ಅವರೇ ಇವತ್ತು ತನಿಖೆ ಮಾಡಲು ಹೋಗಿದ್ದಾರೆಂದರೆ, ತನಿಖೆ ಏನಾಗುತ್ತದೆ ಎನ್ನುವುದು ನಮಗೆ ಗೊತ್ತು. ನಮಗೆ ಒಂದು ವಿಷಯ ಅರ್ಥವಾಗಲಿಲ್ಲ. ನಿಮ್ಮಲ್ಲಿ ಒಳ್ಳೆಯ ರೆವಿನ್ಯೂ ಕಮೀಷನರ್ ಇದ್ದರು, ಬೇರೆಯವರು ಇದ್ದರು, ಅವರನ್ನೆಲ್ಲಾ ಬಿಟ್ಟು ಡೆವೆಲಪ್‌ಮೆಂಟ್ ಕಮೀಷನರ್‌ರೇ ತನಿಖೆಗೆ ಏಕೆ ಹೋದರು ಎಂಬುದು ನಮಗೆ ಅರ್ಥವಾಗಲಿಲ್ಲ. ನಾವು ಮಾತನಾಡಬಾರದೆಂದು ಸುಮ್ಮನಿದ್ದೆವು. ಈ ತನಿಖೆ ಮುಗಿದು ಹೋಗಿದೆ. ಕನಿಷ್ಟ ಅದನ್ನು ಇಲ್ಲಿ ಸೌಜನ್ಯಕ್ಕಾಗಿ ಓದುವವರೆಗಾದರೂ ಸರ್ಕಾರದ ಮುಂದೆ ಅದೂ ಅಸೆಂಬ್ಲಿ ನಡೆಯಬೇಕಾದರೆ ಇಲ್ಲಿ ಬಂದು ಒಂದು ವರದಿ ಕೊಡುವುದನ್ನು ಬಿಟ್ಟು ಎಲ್ಲೆಲ್ಲಿ ಹೇಗೇಗೆ ಬೇಕೋ ಹಾಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಈ ಶಾಸನಸಭೆಯಲ್ಲಿ ಸದರಿ ವಿಷಯವನ್ನು ಪ್ರಸ್ತಾಪ ಮಾಡಿ ಇಲ್ಲಿ ಮಾತನಾಡಿ ತನಿಖೆ ಮಾಡಿ ಎಂದು ಕೇಳಿ, ನೀವು ಉತ್ತರ ಹೇಳುವುದಕ್ಕೆ ಏನಾದರೂ ಘನತೆ ಗೌರವ ಉಳಿಯುತ್ತದೆಯೇ ಎಂದು ಯೋಚನೆ ಮಾಡಬೇಕಾಗಿದೆ. ನಾವು ಮಾತನಾಡಲಿಲ್ಲ. ಬಹಳ ದೊಡ್ಡ ಅಧಿಕಾರಿ, ಇನ್ನೇನು ಸಧ್ಯದಲ್ಲಿಯೇ ನಿವೃತ್ತರಾಗುವವರು. ಆದರೆ ಈ ಹಗರಣದಲ್ಲಿ ನೀವು ಯಾರ ಮೇಲೆ ತನಿಖೆ ಮಾಡುವುದಕ್ಕೆ ಅವರನ್ನು ನೇಮಿಸಿದ್ದೀರಿ, ಇಲ್ಲಿ ಅಷ್ಟೊಂದು ಗೌರವ ತರುವಂಥ ವ್ಯವಸ್ಥೆ ನಡೆದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ನಿಮಗೆ ಈಗಾಗಲೇ ಗೊತ್ತಿದ್ದಂತೆ ಅಭಿವೃದ್ಧಿ ಆಯುಕ್ತರು ಅವರು ಅಪರ ಮುಖ್ಯ ಕಾರ್ಯದರ್ಶಿಗಳೂ ಕೂಡ ಆಗಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಗಳ ಮಟ್ಟದಲ್ಲಿ ಆ ವಿಚಾರಣೆಯನ್ನು ನಡೆಸಿದರೆ ಅದಕ್ಕೊಂದು ಘನತೆ ಬರುತ್ತದೆ ಎನ್ನುವ ಕಾರಣಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಅಪರ ಮುಖ್ಯ ಕಾರ್ಯದರ್ಶಿಗಳ ಮೂಲಕ ಇದನ್ನು ನಡೆಸುತ್ತೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದರು ಮತ್ತು ಈಗಾಗಲೇ ಅವರು ತನಿಖೆಯನ್ನೂ ನಡೆಸುತ್ತಿದ್ದಾರೆ. ಅವರ ಪ್ರಮಾಣಿಕತೆ ಮತ್ತು ನಿಷ್ಪಕ್ಷಪಾತದ ದೃಷ್ಟಿಕೋನದ ವಿಚಾರದಲ್ಲಿ ಎರಡು ಮಾತಿಲ್ಲವೆಂದು ತಾವೂ ಕೂಡ ಹೇಳಿದ್ದೀರಿ. ಈ ಒಂದು ಪ್ರಕರಣದಲ್ಲಿ ಅವರು ಈ ಜವಾಬ್ದಾರಿಯನ್ನು ಒಪ್ಪಿಕೊಳ್ಳಬಾರದಾಗಿತ್ತೆಂದು ಹೇಳಿದಿರಿ. ಆದರೆ ಸರ್ಕಾರಿ ನೌಕರರಾಗಿರುವಾಗ ಯಾವ ಜವಾಬ್ದಾರಿಯನ್ನು ಕೊಡುತ್ತಾರೋ ಅದನ್ನು ಅವರು ನಿರ್ವಹಿಸಲೇಬೇಕಾಗುತ್ತದೆ. ಆ ವರದಿ ಇನ್ನೂ ಬಂದಿಲ್ಲ. ಇನ್ನು ತಾವು ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಜವಾಬ್ದಾರಿಯುತವಾದಂಥ ಸ್ಥಾನದಲ್ಲಿದ್ದು ಇಂಥ ಹೇಳಿಕೆಯನ್ನು ಪತ್ರಿಕಾ ವರದಿಯ ಆಧಾರದಲ್ಲಿ ಆಗಿದೆಯೆಂದು ಉಲ್ಲೇಖಿಸಬಹುದಾಗಿದೆ. ಆದರೆ ಅದು ಆಧಾರ ಎಂದು ಹೇಳಲಿಕ್ಕೆ ಆಗುವುದಿಲ್ಲ. ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ತಾವು ಪ್ರಸ್ತಾಪ

ಮಾಡಿದ್ದೀರಿ. ಮಾನ್ಯ ಮಂತ್ರಿಗಳಾದ ಶ್ರೀ ಬಿ. ಶಿವರಾಮುರವರ ಜೊತೆ ಮಾತನಾಡಿ ಅಂಥ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ, ಆ ಹೇಳಿಕೆಯನ್ನು ಯಾವ ಅರ್ಥದಲ್ಲಿ ಕೊಟ್ಟಿದ್ದರು, ಅದು ಸರಿಯಾದ ರೀತಿಯಲ್ಲಿ ವರದಿ ಆಗಿದೆಯೇ ಅಥವಾ ಇಲ್ಲವೇ ಎನ್ನುವ ವಿಚಾರವನ್ನು ತಿಳಿದುಕೊಂಡು ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ನೆಹರು ಚೆನ್ನಬಸಪ್ಪ ಓಲೇಕಾರ್: ಮಾನ್ಯ ಅಧ್ಯಕ್ಷರೆ,...

ಉಪಾಧ್ಯಕ್ಷರು: ನೀವು ರೈಟಿಂಗ್‌ನಲ್ಲಿ ಕಳುಹಿಸಿಕೊಡಿ. ನಾಳೆ ಮಾತನಾಡುವಿರಂತೆ. ಈಗ ಬಜೆಟ್‌ಗೆ ಸಂಬಂಧಿಸಿದಂತೆ ಶ್ರೀ ವಾಟಾಳ್ ನಾಗರಾಜ್‌ರವರು ಚರ್ಚೆ ಪ್ರಾರಂಭ ಮಾಡಿ.

4. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

(ಮುಂದುವರೆದದು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಉಪಮುಖ್ಯ ಮಂತ್ರಿಗಳು ಹಾಗೂ ಆರ್ಥಿಕ ಮಂತ್ರಿಗಳಾಗಿರುವಂಥ ಶ್ರೀಮಾನ್ ಸಿದ್ದರಾಮಯ್ಯನವರು 2005-06ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ. ಬಹುಶಃ ಅವರ ಪಾಲಿಗೆ ಬಹಳ ವರ್ಷಗಳ ಕಾಲ ಆಯವ್ಯಯವನ್ನು ಮಂಡಿಸತಕ್ಕಂತ ಸುಯೋಗ ದೊರಕಿದೆ. ನಾನು 1967 ರಿಂದ ಬಜೆಟ್ ಮಂಡಿಸಿರುವ ಬಹಳ ಜನ ಅರ್ಥಮಂತ್ರಿಗಳನ್ನು ನೋಡಿದ್ದೇನೆ. 1967 ರಲ್ಲಿ ದಿವಂಗತ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಅರ್ಥಮಂತ್ರಿಗಳಾಗಿ ಬಜೆಟ್ ಮಂಡಿಸಿದ್ದರು. ಮಾನ್ಯ ಯಾಹ್ಯಾರವರು ಅರ್ಥಮಂತ್ರಿಯಾಗಿ ಬಜೆಟ್ ಮಂಡನೆ ಮಾಡಿರುವುದನ್ನು ನೋಡಿದ್ದೇನೆ. ಹಾಗೆಯೇ ಮಾನ್ಯ ಘೋರ್ಪಡೆಯವರು, ಶ್ರೀಮಾನ್ ಮೊಯಿಲಿಯವರು ಹೀಗೆ ಬಹಳ ಜನ ಅರ್ಥಮಂತ್ರಿಗಳು ಬಜೆಟ್ ಮಂಡನೆ ಮಾಡಿರುವುದನ್ನು ನಾನು ನೋಡಿದ್ದೇನೆ. ಇವರಲ್ಲಿ ಹೆಚ್ಚಿನ ರೀತಿಯಲ್ಲಿ ಆಯವ್ಯಯವನ್ನು ಮಂಡಿಸಿರತಕ್ಕಂಥವರು ಶ್ರೀಮಾನ್ ಸಿದ್ಧರಾಮಯ್ಯನವರು. ಜನರ ಸಮಸ್ಯೆಗಳ ಬಗ್ಗೆ, ರಾಜ್ಯದ ಸಮಸ್ಯೆಗಳ ಬಗ್ಗೆ ರೈತರ ಸಮಸ್ಯೆಗಳ ಬಗ್ಗೆ ಸಾಮಾನ್ಯ ಜನರ ಕಾಳಜಿ ಬಗ್ಗೆ ಅವರಲ್ಲಿ ಪ್ರಮಾಣಿಕವಾದ ಚಿಂತನೆ ಇದೆ. ಆ ಚಿಂತನೆಗೆ ತಕ್ಕಂತೆ ಹಣಕಾಸಿನ ವ್ಯವಸ್ಥೆಯನ್ನು ಮಾಡತಕ್ಕಂಥ ಸವಲತ್ತುಗಳು ಅವರಿಗೆ ದೊರಕಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ರಾಜ್ಯದ ಜನರ ಬಗ್ಗೆ ಚಿಂತನೆ ಬಹಳ ಇದೆ. ನಿಮಗಿರತಕ್ಕಂಥ ಕಾಳಜಿ ಬಗ್ಗೆ ನಾನು ಪ್ರಶ್ನೆ ಮಾಡತಕ್ಕಂಥದ್ದಲ್ಲ, ಈ ವಿಚಾರದಲ್ಲಿ ನಾನು ನಿಜಕ್ಕೂ ನಿಮ್ಮನ್ನು ಅಭಿನಂದಿಸುತ್ತೇನೆ. ಇನ್ನೂ ಬಹಳ ವರ್ಷಗಳ ಕಾಲ ನೀವು ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿ. ತಾವು ಮುಖ್ಯಮಂತ್ರಿಯಾದರೂ ಸಹ ಈ ಖಾತೆಯನ್ನು ತಮ್ಮಲ್ಲಿಯೇ ಇಟ್ಟುಕೊಂಡು ಮಂಡಿಸಿ ಎಂದು ನಾನು ಹೇಳುತ್ತಿದ್ದೇನೆ.